



# ಯುವಜನತೆ ಮತ್ತು ಸಮಾಜಕಾರ್ಯ

ಹೆಚ್.ಎನ್. ಸೋಮಸುಂದರಂ

ಬಾಲ್ಯದಿಂದಲೇ ಬೆಂಗಳೂರಿನ ಶ್ರೀರಾಮಕೃಷ್ಣಾಶ್ರಮದ ವಾತಾವರಣದಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವ ಶ್ರೀಯುತ ಸೋಮಸುಂದರಂ ಅವರು ಸುಮಾರು ಎರಡು ದಶಕಗಳಿಗಿಂತಲೂ ಹೆಚ್ಚು ಕಾಲ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ, ಕರುಣಾ ಟ್ರಸ್ಟ್, ಮುಂತಾದ ಅನೇಕ ಸೇವಾ ಸಂಸ್ಥೆಗಳಲ್ಲಿ ಪ್ರಮುಖ ಸಂಪನ್ಮೂಲ ವ್ಯಕ್ತಿಗಳಾಗಿ ಸೇವೆ ಸಲ್ಲಿಸಿರುವರು. ಸಮಾಜ ಕಾರ್ಯದಲ್ಲಿ ಎದುರಾಗುವ ಸಮಸ್ಯೆಗಳನ್ನು ನಿಕಟವಾಗಿ ಅರಿತಿರುವ ಅವರ ಆಳವಾದ ಅನುಭವದಿಂದ ಈ ಲೇಖನ ಮೂಡಿಬಂದಿದೆ.

## ಯುವಜನತೆಯೇ ಏಕೆ ?

**ಯುವಜನತೆ** ಒಂದು ಸಮುದಾಯದ ಮಾನವ ಸಂಪನ್ಮೂಲ. ಬರಿಯ ಸಂಪನ್ಮೂಲವಷ್ಟೇ ಅಲ್ಲ. ಅದು ಸಮುದಾಯದ ಶಕ್ತಿ, ಚೈತನ್ಯದ ಚಿಲುಮೆ, ಹೆಮ್ಮೆಯ ಪ್ರತಿನಿಧಿ, ಒಲುಮೆಯ ಶಿಶು ಕೂಡ. ತಂದೆ ತಾಯಿಯರು ಹೇಗೆ ತಮ್ಮ ಕಿಶೋರ ಮಕ್ಕಳು ಯೋಗ್ಯರೆನಿಸಿದಾಗ ಸಂತೃಪ್ತಿಯನ್ನೂ ನಿರೀಕ್ಷೆಗೆ ಬಾರದಿದ್ದಾಗ ಅತೃಪ್ತಿ ಮತ್ತು ದುಃಖದ ಬೇಗೆಯನ್ನೂ ಅನುಭವಿಸುವರೋ ಸಮಾಜವೂ ಹಾಗೆಯೇ ತನ್ನ ಯುವಜನತೆಯಲ್ಲಿ ಈ ಅನುಭವವನ್ನು ಹೊಂದುತ್ತದೆ. ಅವರಲ್ಲಿ ಅದರ ನಂಬಿಕೆ ಅಪಾರ. ಶಕ್ತಿ, ಉತ್ಸಾಹ, ಕ್ರಿಯಾಶೀಲತೆ, ನಿಷ್ಪಕ್ಷಪಾತ, ನವ್ಯದೃಷ್ಟಿ, ಸೃಜನತೆ ಕಂಡುಬರುವುದು ಯುವಜನಾಂಗದಲ್ಲಿಯೇ. ಯೋಗ್ಯ ಮಾರ್ಗದರ್ಶನದ ಮೂಲಕ ಅವರು ತಮ್ಮ ವ್ಯಕ್ತಿತ್ವವನ್ನು ಸರಿಯಾದ ರೀತಿಯಲ್ಲಿ ರೂಪಿಸಿಕೊಳ್ಳುವರು. ಇದಕ್ಕಾಗಿ ಮಾರ್ಗದರ್ಶನ, ಸಲಹೆಯನ್ನು ಅವರು ಧಾರಾಳವಾಗಿ ಪಡೆಯಬಹುದು. ಎಲ್ಲವೂ ಬರವಣಿಗೆಯಲ್ಲಿ ದಾಖಲಾಗುವ ಈ ಕಾಲದಲ್ಲಿ ಪುಸ್ತಕಗಳಿಂದಲೂ ಅಮೂಲ್ಯ ಮಾಹಿತಿ ದೊರಕಿಸಿಕೊಳ್ಳಬಹುದು. ಇತರ ಸಂಪರ್ಕ ಮೂಲಗಳೂ ಬೇಕಾದಷ್ಟಿದ್ದು ಅವುಗಳಿಂದ ಉಪಯೋಗ ಮಾಡಿಕೊಳ್ಳಲು ಸಾಧ್ಯ. ಹೀಗಾಗಿ ಯುವಜನತೆಯು ಸಮಾಜಕಾರ್ಯ ಕೈಗೊಳ್ಳಲು ಅತ್ಯಂತ ಸೂಕ್ತ ಮತ್ತು ಅರ್ಹ ಸಮುದಾಯವೇ ಸರಿ.

## ಸಮಾಜಸೇವೆ, ಸಮಾಜಕಲ್ಯಾಣ ಮತ್ತು ಸಮಾಜಕಾರ್ಯ

ಸ್ಥೂಲ ದೃಷ್ಟಿಯಲ್ಲಿ 'ಸಮಾಜಸೇವೆ' 'ಸಮಾಜಕಲ್ಯಾಣ'—ಈ ಪದಗಳನ್ನು ಸಮಾಜಕಾರ್ಯಕ್ಕೆ ಪರ್ಯಾಯವಾಗಿ ಧಾರಾಳವಾಗಿ ಉಪಯೋಗಿಸಲಾಗುತ್ತಿದೆ. ಸಮಾಜಕಲ್ಯಾಣವೆಂಬ ಪದವು ಎಲ್ಲರ ಹಿತ, ಹೆಚ್ಚಾಗಿ ಭೌತಿಕ ಸುಖ ಸಂತೋಷಗಳ ಜೀವನದ ಕಡೆ ಬೊಟ್ಟು ಮಾಡಿದರೆ, ಸಮಾಜ ಸೇವೆಯು ತುಳಿತಕ್ಕೆ ಒಳಗಾದವರ, ದೀನ ದಲಿತರ ಸೇವೆ, ಕಡೆಗಣಿಸಲ್ಪಟ್ಟಿರುವ ಸಮುದಾಯಗಳ ಏಳಿಗೆಗಾಗಿ ಮಾಡುವ ವಸ್ತುನಿಷ್ಠ ಸೇವೆಯನ್ನು ಸಾಮಾನ್ಯವಾಗಿ ಸೂಚಿಸುತ್ತದೆ.

**ಸುಧಾರಣೆಯು ಆಮೂಲಾಗ್ರವಾಗಿದ್ದು ಸಮಾಜದ ಬೆಳವಣಿಗೆಗೆ ಅದು ದಾರಿ ಮಾಡಿಕೊಡಬೇಕು.**

ಒಂದು ವಿಧದಲ್ಲಿ ಇದೆಲ್ಲವೂ ಸಮಾಜಕಾರ್ಯವೇ. ಆದರೆ 'ಸಮಾಜ ಕಾರ್ಯ'ವೆಂಬ ಪದವು ಇನ್ನೂ ಹೆಚ್ಚಿನ ಆಳದ ಸ್ತರಗಳಿಂದ ಮೂಡಿ ಬರುವಂತೆ ಕಾಣುತ್ತದೆ. ಸ್ವಾಮಿ ವಿವೇಕಾನಂದರು ಕಂಡ 'ಬುಡಸಹಿತ ಕೊಂಬೆಯ ಸುಧಾರಣೆ' ಅರ್ಥಗರ್ಭಿತವಾಗಿದೆ. ಯಾವುದಾದರೂ ಸಮಸ್ಯೆಗೆ ಅದರ ಮೇಲ್ಪದರವನ್ನು ಮಾತ್ರ ಕೆದಕಿ ಮುಲಾಮು ಹಚ್ಚುವುದು ಒಂದು ವಿಧವಾದರೆ ಸಮಸ್ಯೆಯ ಮೂಲವನ್ನೇ ಕಂಡು ಹಿಡಿದು ಉಚ್ಚಾಟನೆ ಮಾಡುವುದು ಬುಡಸಹಿತ ಕೊಂಬೆಯ ಸುಧಾರಣೆ (*root and branch reform*). ಇದು ಸಮಸ್ಯೆಯನ್ನು ಪೂರ್ಣವಾಗಿ, ನೋಡುವ ದೃಷ್ಟಿ. ಸ್ವಾಮಿ ವಿವೇಕಾನಂದರು ಮುಂದುವರಿದು ಹೀಗೆ ಹೇಳುತ್ತಾರೆ: 'ನಾನು ಸುಧಾರಣೆಯಲ್ಲಿ ನಂಬಿಕೆ ಇಡುವುದಿಲ್ಲ. ನಾನು ಬೆಳವಣಿಗೆಯನ್ನು ನಂಬುತ್ತೇನೆ' ಎಂದು. ಇದರ ಅರ್ಥ ಸುಧಾರಣೆಯು ಆಮೂಲಾಗ್ರವಾಗಿದ್ದು ಸಮಾಜದ ಬೆಳವಣಿಗೆಗೆ ಅದು ದಾರಿ ಮಾಡಿಕೊಡಬೇಕು ಎಂದು ತಿಳಿಯಬಹುದು.

ವ್ಯಕ್ತಿಗಳಂತೆ, ಸಮಾಜಗಳೂ ತಮ್ಮದೇ ರೀತಿಯಲ್ಲಿ ಬೆಳೆಯಲು ಅವಕಾಶವಾಗಬೇಕು. ಈ ಹಿನ್ನೆಲೆಯಲ್ಲಿ ಸಮಾಜಕಾರ್ಯವು ಹೆಚ್ಚಿನ ಅರ್ಥವನ್ನು ಪಡೆಯುತ್ತದೆ. ಆದ್ದರಿಂದ ಇಂದಿನ ಯುವಜನತೆಯ ಮುಂದೆ ನಿಜವಾಗಿ ಇರುವುದೆಂದರೆ ಸಮಾಜಕಾರ್ಯ, ಅದರಲ್ಲಿ

ಆಗಬೇಕಾದುದು ಮಾನವ ನಿರ್ಮಾಣ, ಜನಶಕ್ತಿಯ ಸಂಚಾರ, ವ್ಯಕ್ತಿ, ಸಮುದಾಯಗಳ ಸಶಕ್ತೀಕರಣ.

**ಸಮಾಜಕಾರ್ಯ, ಅಂದು ಇಂದು**

ಸಮಾಜಕಾರ್ಯವನ್ನು ಸದ್ದುಗದ್ದಲವಿಲ್ಲದೆ, ಹಳ್ಳಿಗಳಲ್ಲಿನ ಅಥವಾ ಪಟ್ಟಣದ ಸೀಮಿತ ಪ್ರದೇಶಗಳ ಕೆಲವು ಜನರು ತಾವಾಗಿಯೇ ಮಾಡಿಕೊಂಡು ಬಂದಿರುವುದು ಎಲ್ಲರ ಅನುಭವ. ಹಿರಿಯ ನಾಗರಿಕರು, ಸ್ಥಳೀಯ ಉಪಾಧ್ಯಾಯ ಅಥವಾ ಇತರ ಆಸಕ್ತರು, ಎಲ್ಲರಿಗೂ ತಾಯಿಯಂತಿರುತ್ತಿದ್ದ ಅಜ್ಜಿಯರು—ಇವರೆಲ್ಲರೂ ಯಾವ ಹಣೆಪಟ್ಟಿಯನ್ನೂ ಹಚ್ಚಿಕೊಳ್ಳದೆ ನೂರಾರು ವರ್ಷಗಳಿಂದ ಸಮಾಜಕಾರ್ಯ ನಡೆಸಿದ್ದಾರೆ. ಅಂದಿನ ಸಮಾಜ ಕಾರ್ಯದ ರೂಪ ಮತ್ತು ಆವಶ್ಯಕತೆಗಳೂ ಬೇರೆಯೇ ಇದ್ದು, ಒಂದು ಸಮುದಾಯವಾಗಿ ಊರಿಗೆ ಊರೇ ಸ್ಪಂದಿಸುವ ಮತ್ತು ಭಾಗವಹಿಸುವ ಪರಿಸ್ಥಿತಿಯಿದ್ದಿತು.

ಆದರೆ ಇಂದಿನ ಪರಿಸ್ಥಿತಿ ಬದಲಾಗಿದೆ. ಧಾರ್ಮಿಕ ನೆಲೆಗಟ್ಟಿನಿಂದ ಹೊರಳಿ ಜನರು ಸಾಮಾಜಿಕ ಜೀವನದಲ್ಲಿ ಹೆಚ್ಚಿಗೆ ಒಲವು ತೋರಿರುವುದಲ್ಲದೆ, ರಾಜಕೀಯ, ಆರ್ಥಿಕ ಹಿನ್ನೆಲೆಗಳೂ ಹೊಸ ವೈಜ್ಞಾನಿಕ ಆಯಾಮವೂ ಸೇರಿ ಬೇರೆ ಪರಿಸ್ಥಿತಿಯೇ ಉಂಟಾಗಿದೆ. ಜನರ ವೈಯಕ್ತಿಕ ಭಾವನೆಯ ಶೈಲಿ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಒತ್ತಡಗಳು, ಉದಾರೀಕರಣ ಜಾಗತೀಕರಣ ಸಂದರ್ಭಗಳು—ಇನ್ನು ಹತ್ತು ಹಲವಾರು ಅಂಶಗಳು ಜನರ ಜೀವನದ ಮೇಲೆ ಪರಿಣಾಮ ಬೀರುತ್ತಲಿವೆ.

ಈಗ ಸಮಾಜಕಾರ್ಯ ಮಾಡಬೇಕಾದರೆ ನಿವೃತ್ತರೇ ಸರಿ ಎನ್ನುವ ಮನೋಭಾವವೂ ಬದಲಾಗಿದೆ. ಇಂದು ವಿಶ್ವವಿದ್ಯಾನಿಲಯಗಳು ಗ್ರಾಮೀಣ ಅಭಿವೃದ್ಧಿ, ಸಮಾಜಕಾರ್ಯ ಮುಂತಾದ ವಿಭಾಗಗಳನ್ನು ನಡೆಸಿ ಪದವಿಗಳನ್ನು ನೀಡುತ್ತಿವೆ. ಹಿಂದೆ ಕೇವಲ ಅನುಭವ, ಸಂದರ್ಭಗಳನ್ನನುಸರಿಸಿ ಆಗುತ್ತಿದ್ದ ಕಾರ್ಯವು ಇಂದು ನಿಖರವಾಗಿ ವೈಜ್ಞಾನಿಕ ಚೌಕಟ್ಟಿನಲ್ಲಿ ಮಾಡುವ ರೀತಿ ಮಾರ್ಪಾಟುಗಳಾಗಿವೆ. ಪ್ರವೃತ್ತಿಯಾಗಿ, ಕೇವಲ ಸ್ವಯಂಸೇವೆಯಾಗಿದ್ದುದು ಇಂದು ಬಹುಮಟ್ಟಿಗೆ ವೃತ್ತಿಯಾಗಿ, ಆಳವಾದ ಬೇರುಗಳನ್ನು ಹೊಂದಿ ಗುರುತರ ಕಾರ್ಯಗಳನ್ನು ಸಾಧಿಸಬೇಕಾದ ಸಂದರ್ಭವು ಬಂದೊದಗಿದೆ.

ಹಿಂದಿನ ಕಾಲದಲ್ಲಿ, ಬಹುಮಟ್ಟಿಗೆ ಸರಳ ಪಾರದರ್ಶಕ ಆಡಳಿತವಿದ್ದ ಸಂದರ್ಭದಲ್ಲಿ, ಹೆಚ್ಚು ಸ್ಪರ್ಧೆಯಿಲ್ಲದಿದ್ದ ಜನ ಜೀವನದಲ್ಲಿ ಹಾಗೂ ಧಾರ್ಮಿಕ ಮನೋಭಾವ ಜಾಗೃತವಾಗಿದ್ದು ಒಬ್ಬರ ಮೇಲೊಬ್ಬರ ಲಕ್ಷ್ಯ ಹೆಚ್ಚು ಮಾನವೀಯವಾಗಿದ್ದ ದಿನಗಳಲ್ಲಿ ಸಮಾಜಕಾರ್ಯದ ಆವಶ್ಯಕತೆ ಕಡಿಮೆ ಇತ್ತೆನ್ನಬಹುದು. ಆಯಾ ಕ್ಷೇತ್ರಗಳಲ್ಲಿಯೇ ಜನರಿಗೆ ನ್ಯಾಯ ದೊರಕುತ್ತಿತ್ತು. ಆದರೆ ಈಗ ಹೋರಾಟದ ಕಾಲ ಪ್ರಾಪ್ತವಾಗಿದೆ. ಸಮರ್ಪಣಾಭಾವದಿಂದ, ಎಲ್ಲ ವೃತ್ತಿಗಳವರೂ, ಇತರ ಆಡಳಿತಗಾರರೂ ತಮ್ಮ ತಮ್ಮ ಕೆಲಸಗಳನ್ನು ನಿಷ್ಠೆಯಿಂದ ಮಾಡಿದರೆ ಅದು ನಿಜವಾದ ಸಮಾಜ ಕಾರ್ಯವೇ ಆಗುತ್ತದೆ. ಬದಲಿಗೆ ಇಂದು ಎಲ್ಲೆಡೆ ತಾಂಡವಾಡುತ್ತಿರುವ ಸ್ವಾರ್ಥ ಭ್ರಷ್ಟಾಚಾರಗಳು ಸಮಾಜಕಾರ್ಯದಲ್ಲಿಯೂ ನುಸುಳಿ ಬಂದರೆ, ಭೂತವೆ ಭೂತ ಬಿಡಿಸಲು ಉಪಯೋಗಿಸುವ ಸಾಸಿವೆ ಕಾಳಿನಲ್ಲಿ ಸೇರಿಕೊಂಡಂತಾಗುತ್ತದೆ.

ಪೂರ್ವಕಾಲದಲ್ಲಿ ಜನರು ಸಮಾಜಸೇವೆ, ಸಮಾಜ ಕಲ್ಯಾಣಕ್ಕೆ ಹೆಚ್ಚು ಒತ್ತು ಕೊಟ್ಟಿರುವುದು ಕಂಡುಬರುತ್ತದೆ. ಬಹಳ ಹಿಂದೆ ಅನ್ನದಾನ ಮಾಡುವುದು, ಸಾಲು ಮರ ನೆಡುವುದು ಕಂಡುಬಂದರೆ ನಂತರದ ದಿನಗಳಲ್ಲಿ ರೋಗಿಗಳ ಸೇವೆ, ರಾತ್ರಿ ಶಾಲೆ, ಹೊಲಿಗೆ ತರಬೇತಿಗಳು ಮುಂತಾದುವು ಜನರ ಮನಸ್ಸನ್ನು ಆವರಿಸಿದಂತೆ ಕಂಡು ಬರುತ್ತದೆ. ಹಿಂದಿನ ಸಮಾಜ ಕಾರ್ಯಕರ್ತರು ತಾವೇ ಸಮಸ್ಯೆಗಳ ಬಿಸಿಯನ್ನು ಬಸಿದುಕೊಂಡರೆ, ಇಂದು ಕಾರ್ಯಕರ್ತ ಹಿಂದೆ ನಿಂತು ಕೆಲಸ ಮಾಡುವವನಾಗಬೇಕೆಂಬ ಅರಿವು ಮೂಡಿದೆ. ವಿದ್ಯಾಭ್ಯಾಸ, ಪರಿಸರ ಪ್ರತಿನಿಧಿಸುವಂತಹ ಕಾರ್ಯಕ್ರಮಗಳು ಎಲ್ಲಕಾಲಕ್ಕೂ ಸುಸಂಬದ್ಧವಾಗಿದ್ದು, ಹಳೆಯ ಸಂಪ್ರದಾಯದ ಸಾಲುಮರದ ತಿಮ್ಮಕ್ಕರು ಇಂದಿಗೆ ಇನ್ನೂ ಹೆಚ್ಚು ಸ್ವಾಗತಾರ್ಹರೂ ಆದರಣೀಯರೂ ಆಗುತ್ತಾರೆ. ಯಾವುದೇ ಕಾರ್ಯದ ಮೂಲವಾದ ಜನರ ಸಶಕ್ತೀಕರಣ ಇಂದಿನ ಮಂತ್ರವಾಗಿದೆ. ಆಧ್ಯಾತ್ಮಿಕತೆ ಬೋಧಿಸಲು ಸ್ವಾಮಿ ರಾಮತೀರ್ಥರು ಹೇಳುವ ಕಥೆ ಇಲ್ಲಿಯೂ ಸಾಂದರ್ಭಿಕವಾಗಿದೆ.

ಒಮ್ಮೆ ಒಬ್ಬ ರಾಜನ ಬಳಿಗೆ ಇಬ್ಬರು ಚಿತ್ರಕಾರರು ಬರುತ್ತಾರೆ. ತಮ್ಮ ಕಲಾಪ್ರದರ್ಶನಕ್ಕಾಗಿ ವಿನಂತಿಸುತ್ತಾರೆ. ಅರಮನೆಯಲ್ಲಿನ ಒಂದು ಭಾಗದಲ್ಲಿ ಅವರಿಗೆ ಚಿತ್ರಿಸಲು ಸ್ಥಳ ನಿಗದಿಯಾಗುತ್ತದೆ. ಅವು ಎರಡು ಎದುರುಬದಿರು ಗೋಡೆಗಳು. ಪರದೆಗಳಿಂದ ತಮ್ಮ ಗೋಡೆಗಳನ್ನು ಮುಚ್ಚಿ ಚಿತ್ರಕಾರರು ಕೆಲಸ ಪ್ರಾರಂಭಿಸುತ್ತಾರೆ. ಒಂದು ತಿಂಗಳ ನಂತರ ಕೆಲಸ ಮುಗಿಯುತ್ತದೆ. ರಾಜನೂ ಆಸ್ಥಾನದ ಇತರರೂ ಬರುತ್ತಾರೆ. ಒಬ್ಬನು ಪರದೆ ತೆಗೆದಾಗ ಅಲ್ಲಿ ಭುವನ ಮೋಹಕ ಚಿತ್ರ ಕಂಗೊಳಿಸುತ್ತದೆ. ಅದೇನು ಬೆಟ್ಟಗಳು! ಮರಗಳು! ನೀಲಾಕಾಶ! ನದಿ! ಅಲ್ಲಿ ಸಮಸ್ತವೂ ಇದೆ. ಸರಿ, ಅವನಿಗೇ ಬಹುಮಾನವೆಂದು ಎಲ್ಲರೂ ಭಾವಿಸುತ್ತಾರೆ.

ಈಗ ಇನ್ನೊಬ್ಬನು ಪರದೆ ತೆಗೆಯುತ್ತಾನೆ. ಆಹಾ! ಮೊದಲನೆಯವನ ಚಿತ್ರದ ಸಾವಿರದಷ್ಟು ಸುಂದರವಾಗಿ ಈ ಚಿತ್ರ ಕಾಣುತ್ತದೆ. ಅದು ಗೋಡೆಯ ಮೇಲಿದ್ದರೆ ಇದು ಗೋಡೆಯ ಒಳಗೆ ಅಂತರ್ಗತವಾಗಿದೆ. ಅಲ್ಲಿನ ಸಮಸ್ತವೂ ಇಲ್ಲಿಯೂ ಇದೆ. ರಾಜನೂ, ಆಸ್ಥಾನಿಕರೂ ಅತ್ಯಾಶ್ಚರ್ಯದಿಂದ ಉದ್ಗರಿಸುತ್ತಾರೆ—'ನೀನು ಹೇಗೆ ಗೋಡೆಯ ಒಳಗೆ ಚಿತ್ರ ಬಿಡಿಸಿದೆ' ಎಂದು. ಚಿತ್ರಕಾರನು ಅವರನ್ನು ಹತ್ತಿರಕ್ಕೆ ಕರೆಯುತ್ತಾನೆ. ರಾಜನು ಗೋಡೆಯನ್ನು ಸವರುತ್ತಾನೆ. ಅದು ನುಣುಪಾಗಿದೆ. ಆ ಚಿತ್ರಕಾರನು ಹಗಲೂ ರಾತ್ರಿ ಆ ಗೋಡೆಯನ್ನು ಅಷ್ಟು ಉಜ್ಜಿದ್ದಾನೆ. ಅದೆಷ್ಟೆಂದರೆ ಎದುರಿನ ಚಿತ್ರವನ್ನು ಅದು ಪೂರ್ಣ ಪ್ರತಿಬಿಂಬಿಸುತ್ತದೆ. ಇನ್ನೂ ಯಾವುದಾದರೂ ಚಿತ್ರವನ್ನು ಅಲ್ಲಿ ತನ್ನಿ. ಅದನ್ನೂ ಅದು ಪ್ರತಿಬಿಂಬಿಸುತ್ತದೆ.

ಸ್ವಾಮಿ ರಾಮತೀರ್ಥರು ಹೇಳುತ್ತಾರೆ: 'ನೀವು ವ್ಯಕ್ತಿಯ ವ್ಯಕ್ತಿತ್ವವನ್ನು ನುಣುಪಾಗಿ ಮಾಡಿ. ಅದು ಸಾವಿರ ಚಿತ್ರಗಳನ್ನು ಸುಂದರವಾಗಿ ಪ್ರತಿಬಿಂಬಿಸುತ್ತದೆ.' ಸಮಾಜಕಾರ್ಯಕರ್ತರೂ

ಮಾಡಬೇಕಾದುದಿಷ್ಟೆ. ಅವರು ಸಾವಿರ ಚಿತ್ರ ಬರೆಯಬೇಕಿಲ್ಲ. ಸಾವಿರ ಯೋಜನೆ ಮಾಡಬೇಕಿಲ್ಲ. ವ್ಯಕ್ತಿಗಳ ಸಶಕ್ತೀಕರಣದಲ್ಲಿ ಪಾಲ್ಗೊಂಡರೆ ಸಾಕು. ಸಮಸ್ಯೆಗಳನ್ನೆಲ್ಲಾ ಅವರೇ ಬಗೆಹರಿಸುತ್ತಾರೆ. ಸಮುದಾಯ ತಾನೇ ತಾನಾಗಿ ಸ್ವತಂತ್ರವಾಗಿ ಮುಂದುವರಿಯುತ್ತದೆ.

**ವ್ಯಕ್ತಿಗಳ ಸಶಕ್ತೀಕರಣದಲ್ಲಿ ಪಾಲ್ಗೊಂಡರೆ ಸಾಕು. ಸಮಸ್ಯೆಗಳನ್ನೆಲ್ಲಾ ಅವರೇ ಬಗೆಹರಿಸುತ್ತಾರೆ. ಸಮುದಾಯ ತಾನೇ ತಾನಾಗಿ ಸ್ವತಂತ್ರವಾಗಿ ಮುಂದುವರಿಯುತ್ತದೆ.**

### ಪೂರ್ವ ಸಿದ್ಧತೆ

ಯಾವುದೇ ಕಾರ್ಯ ಪ್ರಾರಂಭಿಸುವಾಗಲೂ, ಅದು ಒಂದು ಆಟವೇ ಆಗಿರಲಿ, ಅದರ ಮೂಲ ನಿಯಮಾವಳಿ ಮತ್ತು ಅವಶ್ಯಕತೆಗಳನ್ನು ತಿಳಿದಿರುವವರು ಮಾತ್ರ ಯಶಸ್ವಿಯಾಗಿ ಭಾಗವಹಿಸಲು ಸಾಧ್ಯ. ಉತ್ತಮ ದೇಹಾರೋಗ್ಯ ಮತ್ತು ದೈಹಿಕ ಶಕ್ತಿ ಯುವಕರನ್ನು ಸಮಾಜಕಾರ್ಯಕ್ಕೆ ಅನುವುಮಾಡುವ ಮೊದಲ ಆವಶ್ಯಕತೆ. ಕಾಡುಮೇಡುಹಳ್ಳಿಗಳಲ್ಲಿಯಾಗಲಿ, ನಗರಪ್ರದೇಶಗಳಲ್ಲಿಯಾಗಲಿ, ಕಾಲ್ನಡಿಗೆಯಲ್ಲಿ ಸುತ್ತಲು, ದೀರ್ಘಾವಧಿ ಚರ್ಚೆಗಳಲ್ಲಿ ಭಾಗವಹಿಸಲು, ದೈಹಿಕ ಶ್ರಮವನ್ನು ಸಹಿಸಲು, ಮನಸ್ಸು ಶಾಂತಿಯಿಂದಿರಲು, ದೈಹಿಕ ಸದೃಢತೆ ಅತ್ಯಾವಶ್ಯಕ. ಅಷ್ಟೇ ಅಗತ್ಯವಾಗಿ ಇರಬೇಕಾದುದು ಮನಸ್ಸಿನ ನಿರ್ಧಾರ. ತನ್ನ ವಿಚಾರಧಾರೆಯನ್ನು ಮಂಡಿಸಲಾಗದ, ಇತರರ ವಿಚಾರವನ್ನು ಆಲಿಸದ, ತಿಳಿದುಕೊಳ್ಳಲಾರದ ಚಂಚಲಚಿತ್ತ ವ್ಯಕ್ತಿಯು ಸಮಾಜಕಾರ್ಯದಲ್ಲಿ ಚೆನ್ನಾಗಿ ಭಾಗವಹಿಸಲಾರ. ಇದನ್ನೇ ಸ್ವಾಮಿ ವಿವೇಕಾನಂದರು 'ಕಬ್ಬಿಣದ ಮಾಂಸಖಂಡಗಳು, ಉಕ್ಕಿನ ನರಗಳು, ಸಿಡಿಲಿನಂತಹ ಇಚ್ಛಾಶಕ್ತಿ' ಎಂದು ಬಣ್ಣಿಸಿರುವುದು. ಈ ಮೂಲಭೂತ ಅರ್ಹತೆ ಪಡೆದ ಯುವ ಕಾರ್ಯಕರ್ತನು ಮನಸ್ಸಿಟ್ಟು ರೂಢಿಸಿಕೊಳ್ಳಬಹುದಾದ ಇನ್ನಿತರ ಅಂಶಗಳೆಂದರೆ ನಮ್ರತೆ ಮತ್ತು ಸರಳಸ್ವಭಾವ, ವಿವೇಕ, ಕಾರ್ಯದಲ್ಲಿ ಯಶಸ್ಸನ್ನು ಪಡೆಯುವ ಛಲ, ಕಷ್ಟ ಸಂದರ್ಭಗಳಲ್ಲಿಯೂ ಧೃತಿಗೆಡದ, ಹಸನ್ಮುಖದಿಂದ ಎಲ್ಲವನ್ನೂ ಎದುರಿಸುವ ಮನೋಭಾವ, ಇದಕ್ಕೆಲ್ಲ ಮೆರುಗಿಟ್ಟಂತೆ ಧೈರ್ಯ ಮತ್ತು ಹೃದಯದಲ್ಲಿ ಪ್ರೇಮ.

ಸರಳ ಸ್ವಭಾವವು ಸಮಾಜ ಕಾರ್ಯಕರ್ತನು ತನ್ನವರೇ ಆದ ಕಾರ್ಯಕರ್ತರೊಡನೆ ಕೂಡಿ ಕೆಲಸ ಮಾಡಲು, ಜನ ಸಮುದಾಯದೊಡನೆಯೂ ಬೆರೆಯಲು ಸಹಾಯ ಮಾಡುತ್ತದೆ. ಅವನ ವ್ಯಕ್ತಿತ್ವವು ಜನರು ತಮ್ಮ ಅಂತರಂಗವನ್ನು ಬಿಚ್ಚಿ ಹೇಳಬಹುದಾದಷ್ಟು ಸರಳವಿರಬೇಕು. ಜನರ ಭಾವನೆ ಅವರಲ್ಲಿಯೇ ಮುದುಡಿಹೋದರೆ ಇನ್ನು ಅದನ್ನು ಆಲಿಸುವವರು ಯಾರು? ಹಂಚಿಕೊಳ್ಳುವವರು ಯಾರು? ಪರಿಹಾರೋಪಾಯಗಳನ್ನು ಚರ್ಚಿಸುವವರು ಯಾರು? ಆದ್ದರಿಂದ ಯುವ ಕಾರ್ಯಕರ್ತನು ತನ್ನ ನಡೆನುಡಿಯಲ್ಲಿ ಸರಳತೆ ಹೊಂದಿ ಸಹೃದಯಿಯಾಗಿರಬೇಕು. ಜನರನ್ನು ಮೇಲೆತ್ತುವ ದೃಷ್ಟಿ ಹೊಂದದೆ ಇದು ತನಗೆ ಒದಗಿದ ಒಂದು ಸದವಕಾಶವೆಂಬುದನ್ನು ಅವನು ಮನಗಾಣಬೇಕು. ವಿವೇಕವೆಂದರೆ ಸಮುದಾಯದ ಆವಶ್ಯಕತೆಗಳು ಸಂದರ್ಭ ಭಾವನೆಗಳನ್ನರಿತು ಯಾರಿಗೂ ಅನ್ಯಾಯವಾಗದೆ ಕಾರ್ಯ ವಿಧಾನ ರೂಪಿಸುವ ಬುದ್ಧಿಶಕ್ತಿ. ಇದಕ್ಕೆ ತಾಳ್ಮೆಯೂ ಬೇಕಾಗುತ್ತದೆ. ಛಲವೆಂದರೆ ಗುರಿಮುಟ್ಟುವವರೆಗೂ ನಿಲ್ಲದಿರುವ ತೀವ್ರ ಆಕಾಂಕ್ಷೆ. ಪ್ರತಿಕ್ಷಣವೂ ನಿರ್ಧಾರಗಳನ್ನು ಬದಲಿಸುತ್ತಾ ಗೊತ್ತು ಗುರಿಯಿಲ್ಲದೆ ಮುಂದುವರಿಯುವವರಿಗೆ ಯಾವ ಕಾರ್ಯವೂ ಸಾಧಿತವಾಗುವುದಿಲ್ಲ. ಒಂದು ಸಣ್ಣ ಕೆಲಸವೇ ಆಗಿರಲಿ, ಅದನ್ನು ಕೊನೆಮುಟ್ಟಿಸುವವರೆಗೂ ಬಿಡದೆ ಅದರೊಡನಿದ್ದು ಸಾಧಿಸುವ ಮನೋಭಾವ ಸಮಾಜಕಾರ್ಯಕರ್ತನಿಗೆ ಇರಬೇಕು. ಇನ್ನು ಕಷ್ಟಸಂದರ್ಭಗಳಲ್ಲಿ ಗಟ್ಟಿಯಾಗಿ ಧೃತಿಗೆಡದೆ ನಿಲ್ಲುವವರನ್ನು ಕುರಿತು 'ನ್ಯಾಯಪಥದಿಂದ ಧೀರರು ಸ್ವಲ್ಪವೂ ವಿಚಲಿತರಾಗುವುದಿಲ್ಲ' ಎಂದು ವರ್ಣಿಸಲಾಗಿದೆ. ಸಮುದಾಯಗಳ ಶೋಷಣೆ, ಅನ್ಯಾಯಗಳ ವಿರುದ್ಧ, ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ, ಅನಾದಿ ಕಾಲದಿಂದಲೂ ಕಾಡಿಬಂದಿರುವ ಮೂಢ ನಂಬಿಕೆಗಳ ವಿರುದ್ಧ ಹೋರಾಡುವವರಿಗೆ ಕಷ್ಟಸಂದರ್ಭಗಳು ಬರದೇ ಇಲ್ಲ. ಜನರು ಶಕ್ತಿಯುತರಾಗುವವರೆಗೆ ವಿಶೇಷವಾಗಿ ಕಾರ್ಯಕರ್ತರು ತಳೆಯುವ ನಿಲುವು ಬಹಳ ಮುಖ್ಯವಾಗಿರುತ್ತದೆ. ಆ ನಿಲುವಿನಲ್ಲಿ ನೂರಾರು ಜನ ತಮ್ಮ ನಿಲುವನ್ನು ಕಾಣುತ್ತಾರೆ. ಸತ್ಯಕ್ಕಾಗಿ ಹೋರಾಡುತ್ತಿರುವಂತೆ ಯುವಕಾರ್ಯಕರ್ತರ ಧೈರ್ಯವೂ ತಾನೇ ತಾನಾಗಿ ಹೆಚ್ಚುತ್ತಿರುತ್ತದೆ. ಕಡೆಯದಾಗಿ ಹೃದಯದಲ್ಲಿ ಪ್ರೇಮವಿಲ್ಲದೆ ಕೇವಲ ಬುದ್ಧಿಯನ್ನನುಸರಿಸಿ ಮಾಡುವ ಕೆಲಸವು ಶುಷ್ಕ ಕರ್ಮವಾಗುತ್ತದೆ. ಆದ್ದರಿಂದ ಸಮಾಜಕಾರ್ಯ ಕೈಗೊಳ್ಳುವ ಪ್ರತಿಯೊಬ್ಬ ಯುವಕ ಯುವತಿಯೂ ತನ್ನ ಕಾರ್ಯವು ಒಲವಿನಿಂದ ಕೂಡಿರಬೇಕೆಂಬುದನ್ನು ಮನದಟ್ಟು ಮಾಡಿಕೊಂಡಿರಬೇಕು.

ಒಲವಿನಿಂದ ಉಲಿಗೆ ಬಲವು,
ಚೊಕ್ಕ ಪ್ರೇಮ ಶಕ್ತಿಧಾಮ
ಪ್ರೇಮಬಲದಿ ನುಡಿಗಳೆಲ್ಲ
ಸಿಡಿಲಿನಂತೆ ಎರಗಿಬಹವು
(ಸ್ವಾಮಿ ಶಾಸ್ತ್ರಾನಂದರ '*ಕೂಗಿ ಕರೆಯುವಾ*' ಕವನದಿಂದ).

### ಸ್ವಾಮಿ ವಿವೇಕಾನಂದರ ವಿಶ್ಲೇಷಣೆ

ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಸಮಾಜ ಕಾರ್ಯಕರ್ತರಿಗೆ ಮೂರು ಗುಣಗಳು ಅತ್ಯಾವಶ್ಯಕ. ಮೊದಲನೆಯದು **ಉತ್ಕಟ ಹೃದಯ ಸಂವೇದನೆ**. ಬುದ್ಧಿ ಮತ್ತು ವಿಚಾರಶಕ್ತಿಗಳಾದರೋ ಕೆಲವು ಹೆಜ್ಜೆ ಹೋಗಿ ನಿಂತುಬಿಡುವುವು. ಸ್ಫೂರ್ತಿ ಬರುವುದು ಹೃದಯದಿಂದ. ಲಕ್ಷಾಂತರ ಮಾನವರ ಜೀವನದಲ್ಲಿ ಹಸಿವು, ನೋವು, ಅಜ್ಞಾನಗಳು ಕಾರ್ಮೋಡದಂತೆ ವ್ಯಾಪಿಸಿದೆಯೆಂಬುದನ್ನು ನೆನೆದು ಯಾರು ಅಶಾಂತರಾಗಿ, ಉನ್ಮತ್ತರಾಗಿ ಹೃದಯ ಸಂವೇದನೆ ಅನುಭವಿಸುವರೋ ಅವರು ಇದರಲ್ಲಿ ಮೊದಲನೆ ಹೆಜ್ಜೆ ಇಟ್ಟಿರುವರು. ಎರಡನೇ ಹೆಜ್ಜೆಯೆಂದರೆ ಸಮಸ್ಯೆಗೆ **ಸೂಕ್ತ ಪರಿಹಾರೋಪಾಯವನ್ನು ಕಂಡುಹಿಡಿಯುವುದು**. ಜನರನ್ನು ದೂಷಿಸದೆ ಸಹಾನುಭೂತಿಯಿಂದ ದುಃಖಶಮನಗೊಳಿಸುವ ಕಾರ್ಯ. ಇದಕ್ಕಿಂತಲೂ ಮುಂದಿನ ಮೂರನೆ ಹೆಜ್ಜೆಯೊಂದಿದೆ. ಅದೆಂದರೆ

ಪರ್ವತೋಪಮ ಆತಂಕಗಳನ್ನು ದಾಟಬಲ್ಲ ಇಚ್ಛಾಶಕ್ತಿ ಬೆಳೆಸಿಕೊಂಡು ದೃಢವಾಗಿ ಕಾರ್ಯ ನಿರ್ವಹಿಸುವ ಸಾಮರ್ಥ್ಯ. ಈ ಮೂರು ಗುಣಗಳಿದ್ದರೆ ಅದ್ಭುತ ಕಾರ್ಯಗಳು ಸಾಧಿತವಾಗುವುದೆಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

ಜನರ ನಡುವೆ ಹೋಗಿ, ಅವರಿಂದಲೇ ಕಲಿತು,
ಅವರಿಗಾಗಿ ಸೂಕ್ತವಾದ ರೀತಿಯಲ್ಲಿ ಕಾರ್ಯ
ಮಾಡುವ ಕೌಶಲ್ಯವನ್ನು ಯುವಜನತೆ ಪಡೆಯಬೇಕು.

### ಜನಶಕ್ತಿ

ಪ್ರಪಂಚವೆಂದಿಗೂ ಇಂತಿಂಥವರು ಸಮಾಜಕಾರ್ಯ ಮಾಡಲಿ ಎಂದು ಯಾರನ್ನೂ ಕೇಳಿಕೊಂಡಿಲ್ಲ, ಅದು ಯಾರನ್ನೂ ಅವಲಂಬಿಸಿಲ್ಲ. ಅದು ಕಾಲಾನುಕ್ರಮದಲ್ಲಿ ತನ್ನದೇ ಆದ ಪರಿಹಾರೋಪಾಯಗಳನ್ನು ಕಂಡುಹಿಡಿದುಕೊಳ್ಳುವುದು. ಜನರೊಡನೆ ಕೆಲಸ ಮಾಡುವ ಸಂದರ್ಭವು ಒಂದು ಸದವಕಾಶವೆಂದು ಯುವಜನತೆ ತಿಳಿಯಬೇಕು. ಸಹಸ್ರಾರು ವರ್ಷಗಳಿಂದ ಸಮುದಾಯಗಳು ತಮ್ಮನ್ನು ತಾವು ನಿಭಾಯಿಸಿಕೊಂಡಿವೆ. ತಮ್ಮದೇ ಆದ ಜಾಣ್ಮೆಯಲ್ಲಿ ಆರೋಗ್ಯ, ಸಮುದಾಯ ಜೀವನ, ಅರಣ್ಯಗಳು, ನ್ಯಾಯವ್ಯವಸ್ಥೆ ಇನ್ನೂ ಹತ್ತು ಹಲವಾರು ಕ್ಷೇತ್ರಗಳಲ್ಲಿ ಹೆಚ್ಚಿನ ಪರಿಜ್ಞಾನವನ್ನು ಪಡೆದುಕೊಂಡಿವೆ. ಈ ಅಪಾರ ಜ್ಞಾನ, ಆಳವಾದ ಅನುಭವ, ಒಗ್ಗಟ್ಟಿನಿಂದ ಮೂಡಿಬರುವ ಬಲವಾದ ಜನಶಕ್ತಿ ಇವುಗಳನ್ನು ಉಪಯೋಗಿಸಿಯೇ ಸಮಾಜಕಾರ್ಯಕರ್ತರು ಕಾರ್ಯವನ್ನು ನಿರ್ವಹಿಸಬೇಕು. ಸಮುದಾಯವನ್ನು ಅದರ ಧನಾತ್ಮಕ ಋಣಾತ್ಮಕ ಅಂಶಗಳೊಡನೆ ಪೂರ್ಣವಾಗಿ ಸ್ವೀಕರಿಸಿ, ಅದನ್ನು ವಾಸ್ತವ ದೃಷ್ಟಿಯಿಂದ ನೋಡುತ್ತ, ಶಕ್ತಿಯುತವನ್ನಾಗಿ ಮಾಡುವ ಕಾರ್ಯವು ಯುವಜನತೆಯ ಮೇಲಿದೆ. ಇದಕ್ಕಾಗಿ ಅವರು ತಾವೇನು ಮಾಡಬೇಕೆಂಬ ಸ್ಪಷ್ಟ ಚಿತ್ರಣ ರೂಪಿಸಿಕೊಳ್ಳಬೇಕು. ಜನರ ನಡುವೆ ಹೋಗಿ, ಅವರಿಂದಲೇ ಕಲಿತು, ಅವರಿಗಾಗಿ ಸೂಕ್ತವಾದ ರೀತಿಯಲ್ಲಿ ಕಾರ್ಯ ಮಾಡುವ ಕೌಶಲ್ಯವನ್ನು ಯುವಜನತೆ ಪಡೆಯಬೇಕು.

### ಸಂಪನ್ಮೂಲಗಳು

ಸಮಾಜ ಕಾರ್ಯಕ್ಕೆ ತುಂಬಾ ಹಣ ಬೇಕಾಗುವುದೆಂಬ ಭಾವನೆ ಒಂದು ತಪ್ಪು ಕಲ್ಪನೆ. ಎಷ್ಟೋ ಬಾರಿ ಅದರಿಂದ ವಿಪರೀತ ಪರಿಣಾಮವೇ ಆಗುವುದು. ಯೋಜನೆಗಳನ್ನು ಆಲೋಚಿಸುವ, ರೂಪಿಸುವ, ಕಾರ್ಯಗತ ಮಾಡುವ, ಮೌಲ್ಯಮಾಪನ ಮಾಡುವ ಕೆಲಸವನ್ನು ಜನಸಮುದಾಯವೇ ಮಾಡುವಂತೆ ಇದ್ದು ಜನರೇ ಆರ್ಥಿಕ ಕಾರ್ಯಕ್ರಮಗಳನ್ನು ನಡೆಸಿದರೆ ಸಮಾಜ ಕಾರ್ಯಕರ್ತರು ಅದರಿಂದ ಮುಕ್ತರಾಗಬಹುದು. ಸಾಧಾರಣವಾಗಿ ಸಮಾಜಕಾರ್ಯಕ್ಕಾಗಿ ಶಾಶ್ವತ ಕಟ್ಟಡಗಳು, ವಸ್ತುಗಳು ಅನಗತ್ಯ. ಸಾಧ್ಯವಾದಷ್ಟು ಕಡಿಮೆ ಪರಿಕರಗಳೊಂದಿಗೆ ಕೆಲಸ ಮಾಡುವುದು ಒಳ್ಳೆಯದು. ಹಾಗೆಯೆ ಯಾವ ಸಮಯದಲ್ಲಿಯಾದರೂ ಸಮಾಜಕಾರ್ಯ ನಿಲ್ಲಿಸಬೇಕಾದರೂ ಅದರಿಂದ ಯಾವ ವಿಪರೀತ ಪರಿಣಾಮ ಆಗದಂತೆ ರೂಪಿಸಿಕೊಂಡಿರಬೇಕು. ಅದನ್ನು ಸುಲಭವಾಗಿ ಇನ್ನೂ ಯಾರಾದರೂ ಮುಂದುವರಿಸಲು ಸಾಧ್ಯತೆ ಇರಬೇಕು. ಯಾವ ಸಮುದಾಯದ ನಡುವೆ ಕೆಲಸ ನಡೆಯುವುದೋ ಅದರಿಂದಲೇ ಧನ, ವಸ್ತು, ಮಾನವ ಸಂಪನ್ಮೂಲಗಳು ಉತ್ಪತ್ತಿಯಾಗಿ ಅವರಿಂದಲೇ ಕೆಲಸ ನಿರ್ವಹಿಸಲ್ಪಟ್ಟು ಗುರಿ ಮುಟ್ಟುವುದು ಅತ್ಯುತ್ತಮ. ಸಮಾಜ ಕಾರ್ಯದಲ್ಲಿ 'ಮೂಗಿಗಿಂತ ಮೂಗುತಿ ಭಾರ' ಎಂಬಂತೆ ನಿರ್ವಾಹಕ ವೆಚ್ಚಗಳೇ ಹೆಚ್ಚಾಗಬಾರದು. ಅದನ್ನು ಅತ್ಯಂತ ಮಿತಿಯಲ್ಲಿರಿಸಿ ಯೋಜನೆಗೆ ಧನವನ್ನು ವಿನಿಯೋಗಿಸಬೇಕು. ಹಾಗೆಯೇ ಜನರ ನಡುವೆ ಯಾವುದೇ ಉದ್ಯಮ ಕೈಗೊಂಡಾಗಲೂ ಈ ನಿಯಮವನ್ನೇ ಪಾಲಿಸಬೇಕು.

ಮಾನವ ಸಂಪನ್ಮೂಲ ಅತ್ಯಂತ ಅಮೂಲ್ಯ. ಒಳ್ಳೆಯ ಸಮಾಜ ಕಾರ್ಯಕರ್ತರನ್ನು ಉಳಿಸಿ ಬೆಳೆಸಬೇಕು. ಎಲ್ಲರಲ್ಲಿಯೂ ಶಕ್ತಿ ಸಾಮರ್ಥ್ಯವಿದೆಯೆಂಬುದನ್ನು ಅರಿತು, ಯುಕ್ತ ತರಬೇತಿ, ಅಭ್ಯಾಸಗಳಿಂದ, ಬಹುಪಾಲು ಯುವಕರನ್ನು ಒಳ್ಳೆಯ ಕಾರ್ಯಕರ್ತರನ್ನಾಗಿ ರೂಪಿಸಬಹುದು.

ಮೊದಲು ಸಂಘಟನೆಯನ್ನು ಗಳಿಸಿ ತನ್ಮೂಲಕ ಜನರೇ
ಸೌಲಭ್ಯ, ಸೇವೆಗಳನ್ನು ರೂಪಿಸಿಕೊಳ್ಳುವಂತೆ
ಮಾಡುವ ಕ್ರಮ ಒಳ್ಳೆಯದು.

### ಸಂಘಟನೆ ಮತ್ತು ಸೌಲಭ್ಯಗಳು

ಜನರಿಗೆ ಕೆಲವು ಸೌಲಭ್ಯಗಳನ್ನೊದಗಿಸಿ ಅವರ ಆರ್ಥಿಕ, ಸಾಮಾಜಿಕ ಉನ್ನತಿಯನ್ನು ಬೇಗ ಸಾಧಿಸಬಹುದು ಎಂದು ಯುವ ಕಾರ್ಯಕರ್ತರು ಆಲೋಚಿಸಬಹುದು. ಆದರೆ ಎಷ್ಟೋ ವೇಳೆ ಇದು ಸಂಘಟನೆಗೆ ಪೆಟ್ಟುಕೊಡುವುದು. ಆದ್ದರಿಂದ ಎಚ್ಚರಿಕೆಯಿಂದ ಇದನ್ನು ನಿರ್ವಹಿಸಬೇಕು. ಮೊದಲು ಸಂಘಟನೆಯನ್ನು ಗಳಿಸಿ ತನ್ಮೂಲಕ ಜನರೇ ಸೌಲಭ್ಯ, ಸೇವೆಗಳನ್ನು ರೂಪಿಸಿಕೊಳ್ಳುವಂತೆ ಮಾಡುವ ಕ್ರಮ ಒಳ್ಳೆಯದು.

ಈ ಲೇಖಕನ ಅನುಭವದಲ್ಲಿ ಒಮ್ಮೆ ಎರಡು ತಾಲ್ಲೂಕಿನ ಹಳ್ಳಿಗಳಲ್ಲಿ ಸಮಾಜಕಾರ್ಯ ನಡೆಯುತ್ತಿದ್ದಾಗ ಒಂದರಲ್ಲಿ ವಿಶೇಷ ಸಹಾಯ ಸೌಲಭ್ಯಗಳನ್ನು ಕೊಡಲಾಯಿತು; ಮತ್ತೊಂದರಲ್ಲಿ ಕೇವಲ ಸಂಘಟನೆಯನ್ನು ಮಾತ್ರ ಹಮ್ಮಿಕೊಳ್ಳಲಾಗಿತ್ತು. ಎರಡು ಮೂರು ವರ್ಷಗಳ ನಂತರ ಕಂಡುಬಂದ ಫಲಿತಾಂಶವೆಂದರೆ ಎಲ್ಲಿ ಕೇವಲ ಸಂಘಟನೆ ಮಾತ್ರ ನಡೆಯಿತೋ ಅಲ್ಲಿ ಸಂಘ ಗಟ್ಟಿಯಾಗಿತ್ತು. ಜನರ ಅರಿವಿನ ಮಟ್ಟ, ಕ್ರಿಯಾಶೀಲತೆ ಮತ್ತು ಕಾರ್ಯಕ್ಷಮತೆ ಚೆನ್ನಾಗಿದ್ದವು. ಮತ್ತೊಂದು ಕಡೆ ಬೆಳವಣಿಗೆ ಸಮರ್ಪಕವಾಗಿ ಆಗಲಿಲ್ಲ. ಜನರ ಗಮನವೆಲ್ಲ ಸಹಾಯ ಸೌಲಭ್ಯಗಳ ಕಡೆ ಇದ್ದಿತೇ ಹೊರತು ಸಂಘಟನೆಯ ಮಹತ್ವವನ್ನು ಅವರು ಅರಿಯಲಾರದಾದರು. ಇದನ್ನು ಸರಿಪಡಿಸಲು ಸಾಕಷ್ಟು ಪ್ರಯತ್ನ ಕಾಲಾವಕಾಶಗಳೇ ಬೇಕಾಯಿತು. ಕೈಹಿಡಿದು ನಡೆಸಲ್ಪಡುವ ಮಗು ನಿಧಾನವಾಗಿ ನಡಿಗೆ ಕಲಿಯುವುದು ಸಹಜವೇ. ಏಳಲು ಬೀಳಲು ಬಿಟ್ಟ ಮಗು ಬೇಗ ತನ್ನ ಕಾಲ ಮೇಲೆ ತಾನು ನಿಂತು ನಡೆಯುವುದು.

### ಸಂಬಂಧಗಳು

ಸಮಾಜಕಾರ್ಯದಲ್ಲಿ ಹಾರ್ದಿಕ ಸಂಪರ್ಕ ಸಂಬಂಧಗಳನ್ನಿಟ್ಟುಕೊಳ್ಳುವುದು ಅತಿ ಮುಖ್ಯ. ಭಿನ್ನಾಭಿಪ್ರಾಯಗಳಿದ್ದರೂ ಅದು ತತ್ವಶಃ

ಹೊರತು ವ್ಯಕ್ತಿಶಃ ಇರಬಾರದು. ಯುವಜನತೆ ಎಲ್ಲರನ್ನೂ ಗೌರವದಿಂದ ನಡೆಸಿಕೊಳ್ಳುವುದಲ್ಲದೆ ತಮ್ಮ ಗೌರವವನ್ನೂ ಕಾಪಾಡಿಕೊಳ್ಳಬೇಕು. ಮತ್ತೊಂದು ಮುಖ್ಯ ವಿಷಯವೆಂದರೆ, ಸಮಾಜ ಕಾರ್ಯದಲ್ಲಿ ಶಾಶ್ವತ ವಿರೋಧಿಗಳಿರುವರೆಂದು ಭಾವಿಸಬಾರದು. ಎಷ್ಟೋ ವೇಳೆ ಒಂದು ಪ್ರಸಂಗದಲ್ಲಿ ವಿರುದ್ಧವಾಗಿ ನಡೆದುಕೊಂಡವರಿಂದಲೇ ಮುಂದಿನ ಕಾರ್ಯಾಚರಣೆಯಲ್ಲಿ ಸಹಕಾರ ಒದಗಿಬರಬಹುದು. ಆದುದರಿಂದಲೇ ಎಲ್ಲಾ ಸಂದರ್ಭಗಳಲ್ಲಿಯೂ ಸಮಾಜಕಾರ್ಯಕರ್ತನು ಅತಿರೇಕಕ್ಕೆ ಹೋಗದೆ ವರ್ತಿಸಬೇಕಾಗುತ್ತದೆ. ಧ್ಯೇಯವು ವ್ಯಕ್ತಿಗಿಂತ ಮುಖ್ಯ ಎಂಬುದನ್ನು ನೆನಪಿನಲ್ಲಿಡಬೇಕು. ಹಾಗೆಯೇ ಒಂದು ಸಮಾಜ ಕಾರ್ಯಕರ್ತರ ಗುಂಪಿನ ನಡುವೆಯೂ ಉತ್ತಮ ನಂಬಿಕೆ, ಸಹಕಾರ ಸೌಹಾರ್ದಗಳಿರಬೇಕು. ಅದು ಒಂದು ನೆಮ್ಮದಿ ಸಂತೋಷಗಳ ದಳವಾಗಿ ಕೆಲಸ ಮಾಡಬೇಕು.



**'ಗುರಿಯೆಷ್ಟು ಮುಖ್ಯವೋ ದಾರಿಯೂ ಅಷ್ಟೇ ಮುಖ್ಯ.'**

*ಸ್ವಾಮಿ ವಿವೇಕಾನಂದ*

### ಸಮುದಾಯ ಸಂಸ್ಕೃತಿ, ಧರ್ಮ

ಯಾವುದೇ ಸಮುದಾಯದ ನಡುವೆ ಕೆಲಸ ಮಾಡುವ ಕಾರ್ಯಕರ್ತರು ಅದರ ಸಂಸ್ಕೃತಿಯನ್ನರಿತು ತಾವೂ ಅದನ್ನು ಗೌರವಿಸಿ ಸಮಾಜಕಾರ್ಯ ಮಾಡಬೇಕು. ಆಗ ಮಾತ್ರ ಸಮುದಾಯದ ಕಡೆಯಿಂದ ಸ್ವೀಕೃತಿ ಬರುವುದು. ಇಲ್ಲದಿದ್ದರೆ ಅವರು ಪ್ರವಾಹದ ಎದುರು ಈಜಿದಂತೆ ಬರಿಯ ಶ್ರಮ ಹೊಂದುವರು. ಜನರ ಸಂಸ್ಕೃತಿ, ಭಾಷೆ, ಧರ್ಮ ಮತ್ತು ಇನ್ನಿತರ ಸಮುದಾಯದ ಕೆಲವು ವಿಚಾರಗಳನ್ನು ಕಲಕಿ ರಾಡಿ ಮಾಡಬಾರದು. ಬದಲಿಗೆ ಸಂಸ್ಕೃತಿ, ಧಾರ್ಮಿಕ ಸೌಹಾರ್ದತೆ, ವಿದ್ಯಾಭ್ಯಾಸ, ವೈಜ್ಞಾನಿಕ ವಿಚಾರಧಾರೆ ಮುಂತಾದುವನ್ನು ಲಿಂಗಭೇದ ಭಾವವಿಲ್ಲದೆ ಜಾಗ್ರತೆಯಿಂದ ಜನರಿಗೆ ತಲುಪಿಸಬೇಕು. ಯಾವ ಸಂದರ್ಭದಲ್ಲಿಯೂ ಅವರ ವೈಯಕ್ತಿಕ ಅಥವಾ ಸಮುದಾಯ ಸ್ವಾತಂತ್ರ್ಯಕ್ಕೆ ಚ್ಯುತಿ ಬಾರದಂತೆ ಎಚ್ಚರಿಕೆ ವಹಿಸಬೇಕು.

ಸಮಾಜಕಾರ್ಯಕ್ಕೆ ಅಡಿಗಲ್ಲಾಗಿ ಅಹಿಂಸೆ ಸತ್ಯ ಶಾಂತಿಗಳನ್ನು ಅನುಸರಿಸಬೇಕು. ಹತ್ತಿರದ ದಾರಿಯೆಂದು ಅಡ್ಡದಾರಿ ಹಿಡಿಯಬಾರದು. 'ಗುರಿಯೆಷ್ಟು ಮುಖ್ಯವೋ ದಾರಿಯೂ ಅಷ್ಟೇ ಮುಖ್ಯ' ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

ಯುವಜನತೆಯು ತಾವು ಮಾಡುತ್ತಿರುವ ಕಾರ್ಯವು ಪರಿಸರಸ್ನೇಹಿಯೇ ಎಂದು ಪ್ರಶ್ನಿಸಿಕೊಳ್ಳಬೇಕು. ಏಕೆಂದರೆ ಸಮಾಜಕಾರ್ಯದ ಕಠಿನ ಸಂದರ್ಭಗಳಲ್ಲಿ ಅನೇಕ ವೇಳೆ ಪರಿಸರಕ್ಕೆ ಹಿತವಲ್ಲದ ಕಾರ್ಯ ಎದುರಾಗಬಹುದು. ಆಗ ಎಚ್ಚರಿಕೆಯಿಂದ ಅದನ್ನು ಪರಿಹರಿಸಿಕೊಳ್ಳಬೇಕು.

### ಕೆರೆಯ ನೀರನು ಕೆರೆಗೆ ಚೆಲ್ಲಿ....

'ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೋ, ಹರಿಯ ಕರುಣದೊಳಾದ ಭಾಗ್ಯವ ಹರಿಸಮರ್ಪಣೆ ಮಾಡಿ ಬದುಕಿರೋ' ಎಂಬ ದಾಸರ ಪದವಿದೆ. ನಮಗೆ ಸಂದಿರುವ ದೇಹ, ಮನಸ್ಸು, ಶಕ್ತಿ ಎಲ್ಲವೂ ಆತನದೇ. ಅದನ್ನು ಆತನಿಗೆ ಸಮರ್ಪಿಸುವುದೆಂದರೆ ದೇವರ ಮಕ್ಕಳಾದ ಮಾನವರಿಗೆ ಪೂಜೆ ಸಲ್ಲಿಸುವುದು. ಎಂದರೆ ಸಮಾಜಕಾರ್ಯದ ಮೂಲಕ ಜನರಲ್ಲಿ ತಮ್ಮ ಅರಿವನ್ನು ಮೂಡಿಸುವುದೇ. ಯುವಜನತೆ ಮಾಡಬೇಕಾದ ಕಾರ್ಯವೇ ಇದು. ಆದರೆ ನೆನಪಿನಲ್ಲಿಡಬೇಕಾದ ಅಂಶವೆಂದರೆ ನಮ್ಮ ಕೈಮುಟ್ಟನಿಂದ ಆ ನೀರು ಕೊಳೆಯಾಗದಿರಲಿ. ಕೊಳೆಯಾಗಬಹುದಾದ ಸಂದರ್ಭವೆಂದರೆ ನಮ್ಮ ಅಜ್ಞಾನ, ಅಹಂಕಾರ, ತಪ್ಪು ಭಾವನೆಗಳು. ಆದ್ದರಿಂದ ನಾವು ಕೈತೊಳೆದುಕೊಂಡು, ಅಂದರೆ ನಿರ್ಮಲ ಚಿತ್ತದಿಂದ, ಸಮಾಜಕಾರ್ಯಕ್ಕೆ ಧುಮುಕಬೇಕು.

ಇದುವೆ ಇಂದಿನ ಯುವಜನತೆಯ ಮುಂದಿರುವ ಮಹಾಕಾರ್ಯ. ಇದನ್ನು ಚೆನ್ನಾಗಿ ಮಾಡಿದರೆ ಇದೇ ಆಧ್ಯಾತ್ಮಿಕ ಹಾದಿಗೆ ಕೊಂಡೊಯ್ಯುವ ಸಾಧನ.

### ಒಂದು ವಿಶೇಷ ಸುದ್ದಿ

ಅಮೆರಿಕದ ಸಂತಾ ಬಾರ್ಬರಾ ಕಾನ್ವೆಂಟ್‌ನ ಪ್ರವ್ರಾಜಿಕಾ ವ್ರಜಪ್ರಾಣಾ ಅವರು ಬರೆಯುತ್ತಾರೆ : 'ನಮ್ಮ ನಿಕಟ ಸ್ನೇಹಿತಳಾದ ಆ್ಯನ್ನ್ ಬರ್ಡಾಕ್ ಕ್ಯೂಬಾದ ಅಧ್ಯಕ್ಷರಾದ ಫೀಡ್‌ಲ್ ಕಾಸ್ಟ್ರೋನ ಪರಮ ಶತ್ರುವನ್ನು ಭೇಟಿ ಮಾಡಲು ಹೋದಳು. ಆತನು ಈಗ ಜೈಲಿನಲ್ಲಿ ಕಠಿಣ ಶಿಕ್ಷೆಗೆ ಒಳಗಾಗಿರುವನು. ಒಂದು ಕಾಲದಲ್ಲಿ ಆತ ಫೀಡ್‌ಲ್‌ನ ಸಹಕಾರಿಯಾಗಿದ್ದನು. ಆದರೆ ಮುಂದೆ ಫೀಡ್‌ಲ್ ಪ್ರಜೆಗಳಿಗೆ ಅಧಿಕಾರವನ್ನು ವರ್ಗಾಯಿಸುವುದಿಲ್ಲವೆಂದು ತಿಳಿದು ಅವನ ವಿರುದ್ಧ ದಂಗೆ ಎದ್ದನು. ಅವನ ಅವಳಿ ಸಹೋದರನನ್ನು ಗಲ್ಲಿಗೇರಿಸಲಾಯಿತು. ಅವನು ಈಗ ಕ್ಯೂಬಾದ ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವ ಜೈಲಿನಲ್ಲಿ ಪರಿತಪಿಸುತ್ತಿರುವನು. ಆ್ಯನ್ನ್ ಬರ್ಡಾಕ್ ಅವನನ್ನು ಸಂಧಿಸಲು ಹೋಗಿ ಅವನಿಗೆ ***The Gospel of Sri Ramakrishna*** (ಶ್ರೀರಾಮಕೃಷ್ಣ ವಚನವೇದ) ಗ್ರಂಥವನ್ನು ಕೊಟ್ಟಳು. ಅವನು ಅದನ್ನು ಮತ್ತೆ ಮತ್ತೆ ಓದಿದನಂತೆ ಮತ್ತು ಅದರಿಂದ ತಾನು ಏನು ಪಡೆದನೊ ಅದಕ್ಕಾಗಿ ಆತ ಆ್ಯನ್ನ್ ಬರ್ಡಾಕ್‌ಳಿಗೆ ಅತ್ಯಂತ ಕೃತಜ್ಞನಾಗಿರುವನಂತೆ.'

(ಪ್ರವ್ರಾಜಿಕಾ ವ್ರಜಪ್ರಾಣಾ ಅವರು ಶ್ರೀ ರಾದಾ ಕೃಷ್ಣ ಅವರಿಗೆ ಬರೆದ ಪತ್ರದಿಂದ)